ಆ) ಈ ಟ್ರಾನ್ಸಫಾರ್ಮರುಗಳ ಪೈಕಿ 2 ಟ್ರಾನ್ಸ್‌ಫಾರ್ಮರುಗಳ ಬುಷಿಂಗ್‌ನಲ್ಲಿ ಸರಬರಾಜಾದ ಒಂದು ವರ್ಷದೊಳಗೆ ಎಣ್ಣೆಯು ಸೊರುತ್ತಿದ್ದುದನ್ನು ಒಪ್ಪಂದದ ಪ್ರಕಾರ ಕಂಪನಿಯವರೇ ದುರಸ್ಥಿ ಮಾಡಿಕೊಟ್ಟಿರುತ್ತಾರೆ.

ವಿಷಯ :- ಗಡಿನಾಡು ಕನ್ನಡಿಗರ ಆಶೋತ್ತರಗಳಿಗೆ ಕನ್ನಡಿಗ ಅಕಾಡೆಮಿಗಳನ್ನು ರಚನೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2396 (424)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕರ್ನಾಟಕ ಗಡಿನಾಡ ಕನ್ನಡಿಗರ ಆಶೋತ್ತರಗಳಿಗಾಗಿ ಕನ್ನಡಿಗ ಅಕಾಡೆಮಿಗಳನ್ನು ರಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

2. ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಳ್ಳಲಿರುವ ಕಾರ್ಯಕ್ರಮ ರೂಪ ರೇಷೆಗಳೇನು?

ಶ್ರೀಮತಿ ಬಿ. ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಅವೃಭದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :-

1. ಇಲ್ಲ.

2. ಉದ್ಭವಿಸುವುದಿಲ್ಲ.

ಉಪಾಧ್ಯಕ್ಷರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಪಟ್ಟಿ

I. ಶ್ರೀ ಎಂ. ಸಿ. ನಾಣಯ್ಯ :- (ಕಾನೂನೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೇ,

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿ) ಅವರ ಪರವಾಗಿ

1956 ನೇ ಸಾಲಿನ ಕರ್ನಾಟಕ ಸಚಿವರ ಸಂಬಳ ಮತ್ತು ಭತ್ಯಗಳ ಅಧಿನಿಯಮ 12 (2) (ಎ) (ಬಿ) ಕಲಮಿನ ಮೇರೆಗೆ ;

1) ಶ್ರೀ ಅಜಯಕುಮಾರ್ ಸರ್‌ನಾಯಕ್, ಯುವಜನ ಸೇವೆ ಮತ್ತು ಕ್ರೀಡೆಗಳ ರಾಜ್ಯ ಸಚಿವರ ವಿದೇಶ ಪ್ರವಾಸದ ಬಗ್ಗೆ ದಿನಾಂಕ 11-9-1995 ರಂದು ಹೊರಡಿಸಲಾದ ಡಿಪಿಎಆರ್ 68 ಜಿಎಎಮ್ 95 ರ ಆದೇಶ ;

2) ಶ್ರೀ ಹೆಚ್. ಸಿ. ಮಹಾದೇವಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ವಿದೇಶ ಪ್ರವಾಸದ ಬಗ್ಗೆ ದಿನಾಂಕ 13-9-1995 ರಂದು ಹೊರಡಿಸಲಾದ ಡಿಪಿಎಆರ್ 86 ಜಿಎಎಮ್ 95 ರ ಆದೇಶಗಳನ್ನು ಮಂಡಿಸುತ್ತೇನೆ.

II. ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ) ಅವರು :-

1993 ನೇ ಇಸವಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 320 ನೇ ಕಲಮಿನ ಮೇರೆಗೆ;

1) ಕೆಲವೊಂದು ಯೋಜನೆಗಳನ್ನು ಜಿಲ್ಲಾ ಪಂಚಾಯತ್ ನಿಂದ ತಾಲ್ಲೂಕು ಪಂಚಾಯತಿಗಳಿಗೆ ವರ್ಗಾಯಿಸುವ ಬಗ್ಗೆ ದಿನಾಂಕ 23-7-1994 ರಂದು ಹೊರಡಿಸಲಾದ ಆರ್‌ಡಿಪಿ 472 ಜಡ್‌ಪಿಎಸ್ 93 ರ (1) ರ ಅಧಿಸೂಚನೆ ;

2) ಕರ್ನಾಟಕ ಸರ್ಕಾರವು ಕೆಲವು ಕಾರ್ಯಕ್ರಮಗಳನ್ನು ತಾಲ್ಲೂಕು ಪಂಚಾಯಿತಿಗಳಿಗೆ ವಹಿಸುವ ಬಗ್ಗೆ ದಿನಾಂಕ 23-7-1994 ರಂದು ಹೊರಡಿಸಲಾದ ಆರ್‌ಡಿಪಿ 472 ಜಡ್‌ಪಿಎಸ್ 93 (II) ಅಧಿಸೂಚನೆ ;

3) ಕರ್ನಾಟಕ ಸರ್ಕಾರವು ಕೆಲವು ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿಗಳಿಗೆ ವರ್ಗಾಯಿಸುವ ಬಗ್ಗೆ ದಿನಾಂಕ 23-7-1994 ರಂದುಹೊರಡಿಸಲಾದ ಆರ್‌ಡಿಪಿ 472 ಜಡ್‌ಪಿಎಸ್ 93 (III) ರ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III. ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿ) ಅವರು :-

1) ವೆನ್‌ಲಾನ್ ಪಾಲಿಸ್ಟರ್ ಫಿಲಂ ಲಿಮಿಟೆಡ್ ಬೆಳವಾಡಿ ಕೈಗಾರಿಕ ಪ್ರದೇಶ, ಮೈಸೂರು, ಇವರು ನೂರು ಕೋಟಿಗೂ ಹೆಚ್ಚು ಬಂಡವಾಳ ಹೂಡಿ ವಿಸ್ತರಿಸಲು : ಬದಲಾವಣೆ : ಆಧುನೀಕರಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ಮುಂದೂಡುವ ಬಗ್ಗೆ ದಿನಾಂಕ 8-8-1994 ರಂದು ಹೊರಡಿಸಲಾದ ಎಫ್‌ಡಿ 97 ಸಿಎಸ್‌ಎಲ್ 94 (1) ರ ಅಧಿಸೂಚನೆ ;

2) ವೆನ್‌ಲಾನ್ ಪಾಲಿಸ್ಟರ್ ಫಿಲಂ ಲಿಮಿಟೆಡ್‌ರವರು ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಮಾರ್ಗವಾಗಿ ತಯಾರಿಸಿ ಅಥವಾ ಮಾರಿದ ಸರಕುಗಳಿಗೆ ತೆರಿಗೆ ನೀಡುವುದನ್ನು ಮುಂದೂಡಿರುವ ಬಗ್ಗೆ ದಿನಾಂಕ 8-8-1995 ರಂದು ಹೊರಡಿಸಲಾದ ಎಫ್‌ಡಿ 97 ಸಿಎಸ್‌ಎಲ್ 94 (1) ರ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

IV ಶ್ರೀ ಆರ್ . ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ) ಅವರು :-

1956 ರ ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ ;

1993-94 ನೇ ಸಾಲಿನ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಅಧಿನಿಯಮಿತದ 54 ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :- (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) ಮಾನ್ಯ ಉಪಾಧ್ಯಕ್ಷರೇ,

V ಶ್ರೀ ಪಿ. ಜಿ. ಆರ್. ಸಿಂಧ್ಯ (ಒಳಾಡಳಿತ ಮಂತ್ರಿ) ಅವರ ಪರವಾಗಿ

1964 ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20 ರ ಕಲಮಿನ ಮೇರೆಗೆ ;

ಉತ್ತರ ಕನ್ನಡ ಜಿಲ್ಲೆ, ಕಾರವಾರ ತಾಲ್ಲೂಕು, ಬಿಣಗಾದಲ್ಲಿರುವ ಬಳ್ಳಾಪುರ ಉದ್ದಿಮೆ ಲಿಮಿಟೆಡ್‌ರವರು ತಮ್ಮ ಆಡಟೋರಿಯಂನಲ್ಲಿ 35 ಎಂ. ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ ದಿನಾಂಕ 11-9-1995 ರಂದು ಹೊರಡಿಸಲಾದ ಹೆಚ್‌ಡಿ85 ಸಿಎನ್‌ಎ 95 ರ ಆದೇಶವನ್ನು ಮಂಡಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಉಪಾಧ್ಯಕ್ಷರೇ,

VI ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ) ಅವರ ಪರವಾಗಿ

1963 ರ ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆಯ 38 (3) ನೇ ಕಲಮಿನ ಮೇರೆಗೆ;

1993-94 ನೇ ಸಾಲಿನ ಬೆಂಗಳೂರು ಕೃಷಿ ವಿದ್ಯಾನಿಲಯದ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಪರಿಶೋಧನಾ ವರದಿ ಮತ್ತು ಉತ್ತರಗಳನ್ನು ಮಂಡಿಸುತ್ತೇನೆ.

VII. ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ) ಅವರು :-

1981 ರ ಕರ್ನಾಟಕ ಕಾನೂನು ನೆರವು ಮಂಡಲಿ ಅಧಿನಿಯಮದ 22 (4) ನೇ ಕಲಮಿನ ಮೇರೆಗೆ ;

1990-91, 1991-92, 1992-93 ಹಾಗೂ 1993-94 ನೇ ಸಾಲುಗಳ ಕರ್ನಾಟಕ ಕಾನೂನು ನೆರವು ಮಂಡಲಿಯ ವಾರ್ಷಿಕ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : (ಕಾನೂನು ಸಂಸದೀಯ ಸಚಿವರು)

VIII. ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿ) ಅವರ ಪರವಾಗಿ

1956 ರ ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ ;

1992-93 ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ಹದಿನಾರನೆಯ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

IX. ಶ್ರೀ ಎನ್. ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿ) ಅವರು :-

1956ರ ಸಾಲಿನ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯ 26 ನೇ ಕಲಮಿನ ಮೇರೆಗೆ ;

1992-93 ನೇ ಸಾಲಿನ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ವಾರ್ಷಿಕ ವರದಿ ಹಾಗೂ 1991-92 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

X. ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಅವರು :-

1986 ನೇ ಸಾಲಿನ ಕರ್ನಾಟಕ ಗ್ರಾಹಕ ಹಿತರಕ್ಷಣಾ ಅಧಿನಿಯಮ 30 (2) ನೇ ಕಲಮಿನ ಮೇರೆಗೆ ;

1) ಕರ್ನಾಟಕ ಗ್ರಾಹಕ ಹಿತರಕ್ಷಣಾ ನಿಯಮ 1988ರ ತಿದ್ದುಪಡಿ ಬಗ್ಗೆ ದಿನಾಂಕ : 24-8-1995 ರಂದು ಹೊರಡಿಸಲಾದ ಎಫ್‌ಸಿಎಸ್ 86 ಎಸ್‌ಎಲ್‌ಎಫ್ 95 ರ ಅಧಿಸೂಚನೆ;

1956ರ ಕಂಪನಿ ಕಾಯ್ದೆಯ 619 ಎ ಕಲಮಿನ ಮೇರೆಗೆ ;

2) 1992-93 ನೇ ಸಾಲಿನ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 20ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

X. ಶ್ರೀಮತಿ ಬಿ. ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಮಂತ್ರಿ) ಅವರು :-

1956ರ ಕಂಪನಿ ಕಾಯ್ದೆಯ 619 ಎ ಕಲಮಿನ ಮೇರೆಗೆ ;

1993-94 ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಮತ್ತು ಅಭಿವೃದ್ಧಿ ನಿಗಮ ನಿಯಮಿತದ ಏಳನೆಯ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು :- ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

10.20 ಎ.ಎಂ

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀ ಜಯಚಂದ್ರ ಅವರ ಹೆಸರಿನಲ್ಲಿ ಇರತಕ್ಕಂಥ ಅರ್ಜಿಯನ್ನು ನಾನು ಸದನದ ಮುಂದೆ ಸಲ್ಲಿಸುತ್ತಿದ್ದೇನೆ. ಬೆಂಗಳೂರು ನಗರದ ಗಾಂಧೀನಗರದಲ್ಲಿರುವ ಸುಬೇದಾರ್ ಛತ್ರಂ ರಸ್ತೆಯಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಗೋದುರಾಯ ಮಠದ ಅಮೂಲ್ಯವಾದ ಆಸ್ತಿ ಖಾಸಗಿಯವರ ಪರವಾಗಿ ದುರ್ವಿನಿಯೋಗವಾಗುತ್ತಿರುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.